ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 85-89
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ಅಕ್ರಮ ಸಂತಾನ' ಆತ್ಮಕಥೆಯಲ್ಲಿ ಹಸಿವು ಮತ್ತು ಬಡತನ

**ಡಾ. ಎಂ.ವೈ.ಶಿವರಾಮು**
ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ

***Abstract:***
*ವ್ಯಕ್ತಿಯ ಆತ್ಮಕಥೆ ಅವರ ಜೀವನ ಚಿತ್ರಣದೊಡನೆ ಸುತ್ತ ಮುತ್ತಲಿನ ಪರಿಸರ, ಸಾಮಾಜಿಕ ಸ್ಥಿತಿ-ಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ನಮ್ಮ ಪೂರ್ವ ಕವಿಗಳು ತಮ್ಮ ಸ್ವವಿವರವನ್ನೇ ತಮ್ಮ ಕಾವ್ಯಗಳಲ್ಲಿ ತಿಳಿಸಿಲ್ಲ. ಇಂತಹ ಚರಿತ್ರೆಗಳು ಓದುಗರ ಮನಕಲಕುವುದರೊಡನೆ ಅನೇಕ ಚಿಂತನೆಗಳಿಗೂ ಓರೆಗಲ್ಲಾಗುತ್ತವೆ. ಕೃತಿಯ ಆಳದಲ್ಲಿ ಅನೇಕ ವಿಷಯಗಳು ಅನಾವರಣಗೊಂಡು ಒಂದು ಕಾಲಘಟ್ಟದ ಜನ ಜೀವನದ ಮೇಲೆ ಬೆಳಕು ಚಲ್ಲುತ್ತವೆ. ಈ ರೀತಿಯ ಆತ್ಮಕಥೆಗಳಲ್ಲಿ ದಲಿತ ಆತ್ಮಕಥೆಗಳು ವಿಶೇಷವಾಗಿವೆ. ಅಲ್ಲದೆ ಇವುಗಳು ಓದುಗರ ಮನದಾಳದಲ್ಲಿ ಅನೇಕ ಸಂವೇದನೆಗಳನ್ನು ಸೃಜಿಸಬಲ್ಲವಾಗಿವೆ. ಸಮಾಜದ ಎಲ್ಲರಲ್ಲೂ ಅಂತಃಕರಣದ ಕಣ್ಣು ತೆರೆಸುತ್ತವೆ. ಇವುಗಳು ವಿಭಿನ್ನ ನೆಲೆಯಲ್ಲಿ ಮೂಡಿಬಂದವುಗಳಾಗಿವೆ. ಆದುದರಿಂದ ಇವುಗಳು ಸಾಹಿತ್ಯ ವಲಯದಲ್ಲಿ ವಿಶಿಷ್ಠ ಸ್ಥಾನದಲ್ಲಿಯೇ ನಿಲ್ಲುತ್ತವೆ. ಪ್ರತಿಯೊಬ್ಬರ ಬದುಕಿನ ಚಿತ್ರಣಗಳು ಒಬ್ಬರಿಗಿಂತ ಮತ್ತೊಬ್ಬರದು ಭಿನ್ನವಾಗಿಯೇ ಇರುತ್ತವೆ. ಆದರೂ ಮನುಷ್ಯ ಎಂದ ಮೇಲೆ ಸಾದೃಶ್ಯ ಹಾಗೂ ವೈದೃಶ್ಯಗಳು ಇದ್ದೇ ಇರುತ್ತವೆ. ನಾವು ಸೇವಿಸುವ ಆಹಾರದಲ್ಲಿಯೇ ವೈವಿಧ್ಯಗಳಿದ್ದರೂ ಆಹಾರ ಸೇವಿಸುವುದರ ಮೂಲ ಉದ್ದೇಶ ಹೊಟ್ಟೆ ತುಂಬಿಸಿಕೊಂಡು ಹಸಿವನ್ನು ನೀಗಿಸಿಕೊಳ್ಳುವುದಾಗಿದೆ. ಅಂತೆಯೇ ಅಕ್ರಮಸಂತಾನ ಆತ್ಮಕಥೆ ವಿಭಿನ್ನ ಪರಿಸರ, ವಿಭಿನ್ನ ಸಂಸ್ಕೃತಿ, ವಿಭಿನ್ನ ಆಚಾರ-ವಿಚಾರ, ವಿಭಿನ್ನ ಸಮುದಾಯಿಕ ಹಿನ್ನೆಲೆಗಳನ್ನು ಹೊಂದಿದೆ.*

**Keywords:** *ಕನ್ನಡ ಸಾಹಿತ್ಯ, ಆತ್ಮಕಥೆ, ಅಕ್ರಮ ಸಂತಾನ, ಶರಣಕುಮಾರ ಲಿಂಬಾಳೆ*

## ಪೀಠಿಕೆ

ಇಂದಿನ ಸಾಹಿತ್ಯದಲ್ಲಿ ಪ್ರಧಾನವಾಗಿ ಆತ್ಮಕಥೆ ಹಾಗೂ ಆತ್ಮಚರಿತ್ರೆಗಳ ಪರಂಪರೆ ಬೆಳೆಯುತ್ತಿದೆ. ಎಲ್ಲ ವರ್ಗಗಳ, ಎಲ್ಲಾ ಸಮುದಾಯದ ಜನರೂ ಕೂಡ ತಮ್ಮ ಇತಿವೃತ್ತಾಂತಕ್ಕೆ ಅಕ್ಷರ ರೂಪ ನೀಡುತ್ತಿದ್ದಾರೆ. ಯಾರು ತಮ್ಮ ಜೀವನ ವಿಚಾರಗಳನ್ನು ತಾವೇ ಬರೆಯುತ್ತಾರೋ ಅದುವೆ ಆತ್ಮಕಥೆ ಎನಿಸಿಕೊಳ್ಳುತ್ತದೆ. ಅದನ್ನೇ ಬೇರೆಯವರು ಬರೆದಾಗ ಜೀವನ ಚರಿತ್ರೆ ಎನಿಸಿಕೊಳ್ಳುತ್ತದೆ. 'ಅಕ್ರಮಸಂತಾನ' ಆತ್ಮಕಥೆ ಮಹಾರಾಷ್ಟ್ರ ಪ್ರದೇಶದ ಹಳ್ಳಿಯ ಬದುಕಿನ ಅದರಲ್ಲೂ ಅಸ್ಪೃಶ್ಯ ಜನಾಂಗದ ಚಿತ್ರಣವನ್ನು ಒಳಗೊಂಡಿದೆ. ಹಿಂದೆಲ್ಲ ಕೇವಲ ಪ್ರಸಿದ್ಧ ಪುರುಷರ ಜೀವನಚರಿತ್ರೆಗಳಷ್ಟೇ ಓದುಗರನ್ನು ತಲುಪುತಿದ್ದವು. ಆದರೆ ಸಾರ್ವತ್ರಿಕ ಶಿಕ್ಷಣದಿಂದಾಗಿ ಎಲ್ಲರೂ ಅಕ್ಷರವಂತರಾಗುವ ಅವಕಾಶ ಲಭ್ಯವಾದುದರಿಂದ ಸಾಮಾನ್ಯರೂ ಕೂಡ ತಮ್ಮ ಜೀವನ ಚರಿತ್ರೆಗಳನ್ನು ತಾವೇ ಬರೆಯತೊಡಗಿದರು. ಇದರಿಂದಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಮನ್ವಂತರವೇ ಸೃಷ್ಟಿಯಾಯಿತು. ಸಮಾಜದಲ್ಲಿನ ಓರೆಕೋರೆಗಳನ್ನು ತೆರೆದಿಡಲಾಯಿತು.

***Please cite this article as:*** ಶಿವರಾಮು, ಎಂ.ವೈ. (2025). 'ಅಕ್ರಮ ಸಂತಾನ' ಆತ್ಮಕಥೆಯಲ್ಲಿ ಹಸಿವು ಮತ್ತು ಬಡತನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(4), 85–89

ಇಂತಹ ದಲಿತ ಆತ್ಮಕಥೆಗಳು ಹೊಸ ಲೋಕವೊಂದರ ಅನಾವರಣ ಮಾಡಿವೆ. ಓದುಗರಿಗೆ ಅತ್ಯಾಶ್ಚರ್ಯ ಸಂಗತಿಗಳನ್ನು ಅರಹುತ್ತವೆ. ಶೋಷಣೆಯ ವಿರುದ್ಧ ದನಿ ಎತ್ತಿದ, ಸಮಾನತೆಗಾಗಿ ಪರಿತಪಿಸಿದ, ಬದುಕಿನ ಹಲವು ಸತ್ಯಗಳನ್ನು ನಿರೂಪಿಸುತ್ತದೆ.

'ಅಕ್ರಮ ಸಂತಾನ' ಆತ್ಮಕಥೆಯು ಶರಣಕುಮಾರ ಲಿಂಬಾಳೆ ಅವರ ಜೀವನ ಚಿತ್ರಣವಾಗಿದೆ. ಶರಣಕುಮಾರ ಲಿಂಬಾಳೆಯವರು ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆ ತಾಲೂಕಿನ 'ಹನೂರ' ಗ್ರಾಮದವರು. ಈ ಆತ್ಮಕಥೆ ಮರಾಠಿ ಭಾಷೆಯಲ್ಲಿ ರಚಿತಗೊಂಡಿದೆ. ಈ ಕೃತಿಗೆ ಮಹಾರಾಷ್ಟ್ರ ರಾಜ್ಯ ಪ್ರಶಸ್ತಿ ದೊರೆತಿದೆ. ಇದನ್ನು ದು.ನಿಂ.ಬೆಳಗಲಿ ಅವರು ಕನ್ನಡೀಕರಿಸಿದ್ದಾರೆ. ಮರಾಠಿಯ "ಅಕ್ಕರಮಾಶಿ" ಕನ್ನಡದಲ್ಲಿ "ಅಕ್ರಮ ಸಂತಾನ'ವಾಗಿ ಮೂಡಿಬಂದಿದೆ. ಈ ಆತ್ಮಕಥೆ ಶೋಷಿತರ, ಅಲಕ್ಷಿತರ, ತುಳಿತಕ್ಕೊಳಗಾದ, ಮೇಲ್ಜಾತಿಯವರ ದೌರ್ಜನ್ಯಕ್ಕೆ ಒಳಗಾದ, ಬಡತನ ಹಸಿವಿನಿಂದ ಕಂಗಾಲಾದ, ಬಹಿಷ್ಕೃತ ಸಮಾಜದ, ಹೃದಯಂತರಾಳದ ಬಿಕ್ಕಳಿಕೆ, ನೋವು, ಆಕ್ರೋಶ, ಅಸಹಾಯಕತೆ, ನಿರಾಸೆ, ದುಗುಡ, ದುಸ್ಥಿತಿ, ಉಳ್ಳವರ ಅಹಂಕಾರ ಮೊದಲಾದವುಗಳನ್ನು ತೆರದಿಡುತ್ತದೆ. ಈ ಆತ್ಮಕಥೆ ಹಸಿವಿನ ತೀವ್ರತೆ ಶೋಷಿತ ಸಮುದಾಯಗಳನ್ನು ಇನ್ನಿಲ್ಲದಂತೆ ಕಾಡುವ ಬಗೆಯನ್ನು ಹೃದ್ಯಂಗಮವಾಗಿ ಚಿತ್ರಿಸಿದೆ. ಹೊಟ್ಟೆ ಹೊರೆಯುವುದೇ ಒಂದು ಕಾಲದಲ್ಲಿ ದುಸ್ಸಾಧ್ಯವಾದುದಾಗಿತ್ತು. ಶೋಷಿತ ಸಮುದಾಯದ ಕರಾಳ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುತ್ತದೆ. ಓದುಗರ ಮನದಾಳವನ್ನು ಕಲಕಿ ಚಿತ್ತ ಕ್ಷೋಭೆಯನ್ನುಂಟು ಮಾಡುತ್ತದೆ. ಒಂದು ಬಹಿಷ್ಕೃತ ಸಮಾಜದ ದುರಂತದ ಬದುಕು ಹೇಗಿತ್ತು ಎಂಬುದು ತಿಳಿಯುತ್ತದೆ. ಬಡತನವನ್ನೇ ಹಾಸುಂಡು ಹೊದ್ದು ಮಲಗಿ ಬದುಕಿನ ನಾನಾ ಕಷ್ಟ ಕೋಟಲೆಗಳನ್ನು ಎದುರಿಸಿದ ಬದುಕಿನ ಚಿತ್ರಣವಿದೆ.

ಹಿಂದೆ ಭಾರತದಾದ್ಯಂತ ಹಸಿವಿನ ಭೂತದ್ದೇ ನರ್ತನವಾಗಿತ್ತು. ಭಾರತವನ್ನು ಹಸಿವಿನಷ್ಟು ತೀವ್ರವಾಗಿ ಕಾಡಿದುದು ಬೇರೊಂದಿರಲಿಲ್ಲ. ಸ್ವಾತಂತ್ರ್ಯಾನಂತರದ ಅನೇಕ ವರ್ಷಗಳವರಗೆ ಹಸಿವಿನ ಬಾಧೆ ಸರ್ವೇ ಸಾಮಾನ್ಯ ಸಂಗತಿಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಈ ಬಾಧೆಯಿಂದ ಮುಕ್ತವಾಗುತ್ತಿದೆ. ಆತ್ಮಕಥೆಯ ಆರಂಭದಲ್ಲಿಯೇ ಬಡತನದ ಚಿತ್ರಣ ಬಿತ್ತರಗೊಂಡಿದೆ. ಶಾಲೆಯ ಹುಡುಗರೆಲ್ಲಾ ವನಭೋಜನಕ್ಕೆ ತೆರಳಿದಾಗ ಮಾರುತ್ಯಾನಿಗೆ ರೊಟ್ಟಿ ಕಟ್ಟಿ ತರಲು ಬಟ್ಟೆ ಇರದೆ ಕಥೆಗಾರರ ಗಂಟಿನಲ್ಲಿಯೇ ಕಟ್ಟಲಾಗಿತ್ತು. ಇದು ಬಹುತೇಕರ ಪರಿಸ್ಥಿತಿಯಾಗಿತ್ತು. ಕೆಳಸ್ತರದ ಜನಗಳೆಲ್ಲಾ ಬಹುತೇಕ ಬಡವರಾಗಿದ್ದರು. ವ್ಯವಸಾಯವೇ ಪ್ರಧಾನ ಕಸುಬಾಗಿದ್ದರಿಂದ ಜಮೀನುದಾರಿಕೆ ಎಲ್ಲವೂ ಮೇಲ್ವರ್ಗದವರ ಪಾಲಾಗಿದ್ದವು. ಬಡವರೆಲ್ಲ ಕೃಷಿ ಕಾರ್ಮಿಕರಾಗಿ ದುಡಿಯುತಿದ್ದರು. ಇವರಿಗೆ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ ಬಟ್ಟೆಗಿದ್ದರೆ ಹೊಟ್ಟೆಗಿಲ್ಲದ ಪರಿಸ್ಥಿತಿಯಾಗಿತ್ತು. ಮೇಲ್ವರ್ಗದ ವಿದ್ಯಾರ್ಥಿಗಳು ತಂದಿದ್ದ ಬುತ್ತಿಯಲ್ಲಿ ಉಳಿದಿದ್ದನ್ನು ನಿಮ್ನ ವರ್ಗದವರಿಗೆ ನೀಡುತ್ತಾರೆ. ಆ ಬುತ್ತಿಯಲ್ಲಿದ್ದ ವಿವಿಧ ಖಾದ್ಯಗಳು ಇವರ ಮನೆಯಲ್ಲಿ ಎಂದೂ ದೊರೆಯಲಾರದವಾಗಿದ್ದವು. ಕಥೆಗಾರರು ಈ ವಿಷಯವನ್ನು ತಮ್ಮ ಅವ್ವನಿಗೆ ಹೇಳಿದಾಗ ಆಕೆ "ನನಗೂ ಒಂಚೂರ ತರಬಾರದೇನು? ಉಳಿದ ಅನ್ನ ಅಮೃತ ಆಗಿರತೈತಿ" ಎನ್ನುತ್ತಾಳೆ. ಆಕೆಯ ಈ ಮಾತುಗಳು ಇಡೀ ಸಮುದಾಯದಲ್ಲಿನ ಹಸಿವಿನ ತೀವ್ರತೆಯನ್ನು ಅರಹುತ್ತದೆ.

ಹಸಿವು, ಬಡತನ ಇವುಗಳಷ್ಟೇ ಇವರನ್ನು ಬಾಧಿಸುವಂತವಾಗಿರಲಿಲ್ಲ. ಮೇಲ್ವರ್ಗದ ಜನರ ಮೂದಲಿಕೆಯ ನುಡಿಗಳು ಈಟಿಯಿಂದ ಚುಚ್ಚಿದಂತೆ ಚುಚ್ಚುತಿದ್ದವು. ಮಾಸ್ತರರು ಹೇಳುವ "ಬೋಸುಡಿ ಮಗನ, ಬರೀ ಎತ್ತಾ ತಿನ್ಲಾಕ ಮಾತ್ರ ಬರ್ತೇನು" ಎಂಬುದು ಅವರಲ್ಲಿದ್ದ ಈ ಸಮುದಾಯದ ಮೇಲಿನ ತಾತ್ಸಾರಕ್ಕೆ ಹಿಡಿದ ಕನ್ನಡಿಯಂತಿದೆ. ಇವರ ಶಾಲೆ

ನಡೆಯುತಿದ್ದುದೇ ದೇವಸ್ಥಾನದಲ್ಲಿ. ಇವರ ಸ್ಥಾನ ಬಾಗಿಲ ಹತ್ತಿರ. ಅಲ್ಲದೆ ಶನಿವಾರ ಶಾಲೆಯನ್ನು ಸಾರಿಸುವ ಕೆಲಸ ಇವರದಾಗಿತ್ತು. ಆದರೆ ದೇವಾಲಯದ ಒಳಗಡೆಗೆ ಪ್ರವೇಶವಿರಲಿಲ್ಲ. ಇಂದಿಗೂ ಅಲ್ಲಲ್ಲಿ ಶೋಷಿತರಿಗೆ ದೇವಾಲಯ ಪ್ರವೇಶ ನಿರಾಕರಣೆ ಹಾಗೂ ಪಂಕ್ತಿ ಬೇಧಗಳು ಜೀವಂತವಾಗಿವೆ. ತಿಪ್ಪೆಯಗುಂಡಿ, ನಾಯಿ, ಹಂದಿ, ಗುಡಿಸಲು ಇವೇ ಅವರ ಸಂಗಾತಿಗಳಾಗಿದ್ದವು ಎನ್ನುತ್ತಾರೆ. ಶಾಲೆಯಲ್ಲಿ ಹುಡುಗರು ಜಾತಿಯ ಹೆಸರಿಡಿದು ಕೂಗಿ ಕುಚೇಷ್ಟೆ ಮಾಡುತಿದ್ದರು. ಉಡಲು ಚಡ್ಡಿಯೂ ಇಲ್ಲದ ಪರಿಸ್ಥಿತಿ ಇವರದಾಗಿತ್ತು. ಆಗಷ್ಟ್ 15 ಹಾಗೂ ಜನವರಿ 26ರ ಪ್ರಭಾತ ಫೇರಿಯಲ್ಲಿ ಎಲ್ಲರೂ ಸಮವಸ್ತ್ರದಲ್ಲಿದ್ದರೆ ಇವರು ಮಾತ್ರವೇ ಚಡ್ಡಿಯಲ್ಲಿ ಅಂಗಿ ಸಿಕ್ಕಿಸುತಿದ್ದರು. ನದಿಯಲ್ಲೂ ಕೂಡ ಇವರ ಜಾಗ ಕೆಳಗಿನದಾಗಿತ್ತು. ಅದರಲ್ಲೂ ಕೆಳಜಾತಿಯವರಿಗೆ ಪಂಗಡದ ಆಧಾರದಲ್ಲಿ ನದಿ ಜಾಗಗಳನ್ನೂ ಮೀಸಲಿರಿಸಲಾಗಿತ್ತು. ಪರಿಶಿಷ್ಟರಲ್ಲೂ ಜಾತಿಯ ತರತಮ ಭಾವನೆ ನೆಲೆಯೂರಿತ್ತು.

ಇವರೂರಿನಲ್ಲಿ ದೊಡ್ಡವರ ಮನೆಗಳ ಲಗ್ನಗಳು ಇವರಿಗೆ ಪರಮಾನಂದ ನೀಡುತಿದ್ದವು. ಇಂತಹ ಸ್ಥಿತಿ ಕೇವಲ ಇವರದ್ದಷ್ಟೇ ಅಲ್ಲ ಎಲ್ಲಾ ಕಡೆಗಳಲ್ಲಿಯೂ ಇದೇ ಸನ್ನಿವೇಶಗಳಿದ್ದವು. ಬಹುತೇಕ ದಲಿತ ಆತ್ಮಕಥೆಗಳಲ್ಲಿ ಇಂತಹ ಚಿತ್ರಣ ಕಾಣಸಿಗುತ್ತದೆ. ಲಗ್ನದಲ್ಲಿ ಊಟವಲ್ಲದೆ ಮಂಟಪ ನೋಡಲು ಸಿಗುತಿತ್ತು. ವಾದ್ಯ ಮತ್ತು ಧ್ವನಿವರ್ಧಕ ಕೇಳಲು ಸಿಗುತಿತ್ತು ಎಂಬ ಮಾತುಗಳು ಇವಕ್ಕೆಲ್ಲ ಯಾವ ಜಾತಿ ಕಟ್ಟಲೆಗಳೂ ಇಲ್ಲ, ಆದರೆ ಮನುಷ್ಯರಾದ ನಮಗೆ ಮಾತ್ರವೇ ಎಂದು ಮೂದಲಿಸುವಂತಿದೆ. ಲಗ್ನದ ಮನೆಯ ಮುಂದೆ ಅವರು ನೀಡುವ ಔತಣಕ್ಕಾಗಿ ಜಾತಕ ಪಕ್ಷಿಗಳಂತೆ ಕಾದು ನಿಲ್ಲುತಿದ್ದರು. ಇವರ ತಾಯಿ ಲಗ್ನಕ್ಕೆ ಬರುತ್ತಿರಲಿಲ್ಲ. ಆದ್ದರಿಂದ ಇವರೇ ತುಡುಗಿನಿಂದ ಹುಗ್ಗಿ ತರುತಿದ್ದರು. ಮನೆಯಿಂದಲೇ ತಾಟು ತೆಗೆದುಕೊಂಡು ಹೋಗಬೇಕಿತ್ತು. ಇವರಿಗೆ ಅಲ್ಲಿಗೆ ಹೋಗಿ ಉಣ್ಣಲು ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಹೋಗಬೇಕಿತ್ತು. ಹುಗ್ಗಿಯ ಆಸೆಯಿಂದ ಮತ್ತೆ ಮತ್ತೆ ಊಟಕ್ಕೆ ಕೂರುತಿದ್ದರು. ಸೆಗಣಿ ಕುಳ್ಳು ಬಡಿದು ಮಾರುತಿದ್ದರು. ಸಗಣಿಗಾಗಿ ಕಾಡು, ಮೇಡು, ಊರೆಲ್ಲಾ ಸುತ್ತಬೇಕಿತ್ತು. ಜೋಳದ ತೆನೆ ತಿಂದ ಕಾಳಿನ ಸೆಗಣಿ ಸಿಕ್ಕರೆ ಅದನ್ನು ತೊಳೆದು ಸಿಕ್ಕ ಜೋಳದ ಕಾಳನ್ನು ಬಳಸುತಿದ್ದರು. ಇದರಿಂದ ತಯಾರಿಸಿದ ರೊಟ್ಟಿ ಸೆಗಣಿ ವಾಸನೆಯಿಂದ ಕೂಡಿರುತಿತ್ತು. ಹೊಟ್ಟೆಪಾಡು ಎಲ್ಲವನ್ನೂ ಸಹ್ಯವಾಗಿಸುತಿತ್ತು. ಅದನ್ನು ಲೆಕ್ಕಿಸದೆ ಅದನ್ನೇ ಸೇವಿಸುತಿದ್ದರು. ಹಸಿವಿನ ದಾರುಣತೆಯನ್ನು ಇದು ತೆರೆದಿಡುತ್ತದೆ.

ಹೆಣದ ಮೇಲೆ ಎಸಯುತಿದ್ದ ಕಾಸು ಸಹ ಇವರಿಗೆ ಅಸಹ್ಯದ್ದಾಗಿರಲಿಲ್ಲ. ಆಯಗಾರಿಕೆ ಕೂಡ ಪಾಳಿ ಪ್ರಕಾರವಾಗಿತ್ತು. ಆಯಗಾರಿಕೆ ಬಂದವರಿಗೆ ಸುಗ್ಗಿಯಲ್ಲಿ ಕಾಳು ಪಡೆಯುತಿದ್ದರು. ದನ, ಎಮ್ಮೆ ಸತ್ತರೆ ಇವರಿಗೆ ಕರೆ ಹೋಗುತಿತ್ತು. ಅದರ ಒಡತಿ ಎಂಟು ಬೊಗಸೆ ಕಾಳು ನೀಡುತಿದ್ದಳು. ಜೊತೆಗೆ ಮಾಂಸ ದೊರೆಯುತಿತ್ತು. ಕೆಲವರು ದೂರದ ಊರುಗಳಿಂದ ಎಮ್ಮೆಗಳನ್ನು ಕದ್ದು ತರುತಿದ್ದರು. ಅಂದು ಎಲ್ಲರ ಮನೆಗಳಲ್ಲೂ ಮಾಂಸದೂಟ. ಹೊಟ್ಟೆಗಿಲ್ಲದ ಸ್ಥಿತಿಯಲ್ಲಿದ್ದ ಇವರಿಗೆ ಶುಚಿತ್ವ ಗಗನ ಕುಸುಮವಾಗಿತ್ತು. ಬುಧವಾರದ ಸಂತೆಗೆ ದಾದಾ ನೀಡಿದ ಹತ್ತು ಪೈಸೆಯಲ್ಲಿ ಪೇಡ ಖರೀದಿಸಿ ಅದನ್ನು ಶಬರಿ ಎಂಜಲು ಮಾಡಿ ಉಳಿಸಿ ತನ್ನವ್ವನಿಗೆ ತಂದು ಕೊಡುತಿದ್ದರು. ಅನೇಕ ದಿನ ಉಪವಾಸವೇ ಗತಿಯಾಗಿತ್ತು. ರೊಟ್ಟಿಗಾಗಿ ರೋಧಿಸುತ್ತಿದ್ದಾಗ ಸಂತಾಮಾಯಿ ಊರಲ್ಲಿ ಬೇಡಿ ತರುತಿದ್ದಳು. ಉಪವಾಸ ಇವರ ಜನ್ಮಕ್ಕೆ ಅಂಟಿದ ಶಾಪ ಎಂದು ಹೀಗೆಳೆಯುತ್ತಾರೆ. ಎಲ್ಲ ಸಹೋದರಿಯರು ಉಪವಾಸವೇ ಮಲಗುತಿದ್ದರು. ಬುಧವಾರದ ಸಂತೆಯಲ್ಲಿ ಕಳ್ಳತನದಿಂದ ಹೊಟ್ಟೆ ತುಂಬಿಸಿಕೊಳ್ಳುತಿದ್ದರು. ಕಳ್ಳತನ ತಪ್ಪೆಂದು ಇವರಿಗೆ ಅನಿಸುತಿತ್ತು. ಆದರೆ ಉಪವಾಸ ನೀಗಲು ಬೇರೆ ಯಾವ ದಿಕ್ಕೂ ತೋಚುತ್ತಿರಲಿಲ್ಲ. ಸಹೋದರಿ

ಒಬ್ಬಳು ಹಸಿವನ್ನು ನೀಗಿಸಿಕೊಳ್ಳಲು ಬಾಳೆ ಹಣ್ಣಿನ ಸಿಪ್ಪೆಯನ್ನೇ ತಿನ್ನುತಿರುತ್ತಾಳೆ. ಇದನ್ನು ನೋಡಿದ ಕಥೆಗಾರರು ಆಕೆಯನ್ನು ದಂಡಿಸುತ್ತಾರೆ. ಆದರೆ ಇವರ ತಾಯಿಯ ಹೇಗಾದರೂ ಆಕೆ ಬದುಕಲಿ ಎಂಬ ಮಾತು ಬದುಕಿನ ಅನಿವಾರ್ಯತೆಯನ್ನು ಸೂಚಿಸುತ್ತದೆ.

ಕ್ಷೌರಿಕರು ಇವರಿಗೆ ತಲೆ ಬೋಳಿಸುವುದಾಗಲಿ, ಕೂದಲು ಕತ್ತರಿಸುವುದಾಗಲಿ ಮಾಡುತ್ತಿರಲಿಲ್ಲ. ಮನೆಯಲ್ಲಿ ಇವರವ್ವನೇ ಪರಪರ ಎಂದು ಬ್ಲೇಡಿನಲ್ಲಿ ಕೆರೆಯುತಿದ್ದಳು. ಇಂದಿಗೂ ಕೆಳವರ್ಗದ ಜನಗಳಿಗೆ ಕ್ಷೌರದ ಅಂಗಡಿಗಳು ಬಾಗಿಲು ಮುಚ್ಚಿವೆ. ಜೀವನ ನಿರ್ವಹಿಸಲು ಸಾರಾಯಿ ಮಾರಾಟ ಮಾಡುತ್ತಾರೆ. ಸಾರಾಯಿ ಕುಡಿಯಲು ಬರುವವರು ಕುಡಿದು ವಾಂತಿ ಮಾಡಿದರೂ ಇವರಷ್ಟಕ್ಕೆ ಊಟ ಮಾಡುತಿರುತ್ತಾರೆ. ಸಾರಾಯಿ ಮಾರಾಟವೇನು ಸುಲಭದ್ದಾಗಿರಲಿಲ್ಲ. ಪೋಲೀಸರ ಭಯ ಸದಾ ಕಾಡುತಿತ್ತು. ಇದು ಕನಕದಾಸರು ಹೇಳುವಂತೆ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬಂತಿದೆ. ಅಲ್ಲದೆ 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬುದನ್ನು ನೆನಪಿಸುತ್ತದೆ. ಇಳಿವಯಸ್ಸಿನಲ್ಲೂ ದಾದಾ ಬಸ್ಸಲ್ಲಿ ಹಮಾಲಿ ಕೆಲಸ ಮಾಡುತಿದ್ದನು. ಬಸ್ಸಿನ ಬರವನ್ನೇ ಯಾವಾಗಲೂ ನಿರೀಕ್ಷಿಸುತಿದ್ದರು. ಅಂದು ದುಡಿದದ್ದು ಅಂದಿನ ಹೊಟ್ಟೆಗಾಗುತಿತ್ತು. ಕೂಲಿ ಸಿಗದ ದಿನ ಹೊಟ್ಟೆಯೂ ಖಾಲಿಯಾಗಿಯೇ ಇರಬೇಕಿತ್ತು. ದಾದಾನ ಹಮಾಲಿ ತಪ್ಪಿದರೆ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯಾಗಿತ್ತು. ಬಡವರಿಗೆ ಎಂದಿಗೂ ನಿವೃತ್ತಿ ಇರುವುದಿಲ್ಲ. ಹೊಟ್ಟೆಗಾಗಿ ಸಾಯುವ ತನಕವೂ ಅವರು ದುಡಿದೇ ತಿನ್ನಬೇಕು. ಹಿಂದೆ ಇಂದಿನಂತೆ ವೃದ್ಧಾಪ್ಯ ವೇತನ ಮುಂತಾಗಿ ಸರ್ಕಾರದ ನೆರವೂ ಕೂಡ ದೊರೆಯುತ್ತಿರಲಿಲ್ಲ. ಹೊಟ್ಟೆಪಾಡಿನ ಕಷ್ಟ ಅಷ್ಟಿಷ್ಟಲ್ಲ ಎಂಬಂತಿತ್ತು.

ತಾಯ ಮಾಸಮಾಯಿಗಿಂತಲೂ ಅಜ್ಜಿ ಸಂತಾಮಾಯಿಯ ಜೊತೆಯಲ್ಲಿಯೇ ಹೆಚ್ಚಿನ ಜೀವನ ಕಳೆದರು. ಇವರ ಸಲುವಾಗಿಯೇ ಹುಟ್ಟಿದ ಜಗಳದಿಂದಾಗಿ ಮನೆ ತೊರೆದು ಎಸ್.ಟಿ.ಸ್ಟಾಂಡ್ಗೆ ಬಂದು ನೆಲೆಯೂರುತ್ತಾರೆ. ಬಸ್ಸು ನಿಲ್ದಾಣವೇ ಇವರ ಆಶ್ರಯ ತಾಣವಾಗಿತ್ತು. ಅಲ್ಲೇ ನಾಲ್ಕು ತಗಡಿಂದ ಆಶ್ರಯ ಮಾಡಿಕೊಂಡಿದ್ದರು. ಮಳೆಗಾಲದಲ್ಲಿ ಮನೆಯೆಲ್ಲಾ ಸೋರುತಿತ್ತು. ಬೇಸಿಗೆಯಲ್ಲಿ ಬಿಸಿಲ ಜಳ ವಿಪರೀತ. ಒಂದು ಮಣ್ಣಿನ ಕೊಡ, ಒಂದು ಮಣ್ಣಿನ ಹರಿವೆ, ಮೂರು ಕಲ್ಲಿನ ಒಲೆ ಇವೇ ಮನೆಯೊಳಗಿನ ಮಹತ್ವದ ವಸ್ತುಗಳಾಗಿದ್ದವು. ಇದು ಇವರ ದಾರಿದ್ರ್ಯದ ಬಡತನವನ್ನು ಧ್ವನಿಸುತ್ತದೆ. ಸಂದೂಕಿನಲ್ಲಿ ರೊಟ್ಟಿ, ಪಲ್ಲೆ ಇಡುತಿದ್ದರು. ಕಾಯಿ ಪಲ್ಲೆಯ ಗಡಿಗೆಯಲ್ಲಿ ಜಿರಲೆ ಸತ್ತು ಬೀಳುತಿದ್ದವು. ಜಿರಲೆಗಳನ್ನು ಆಯ್ದು ಪಲ್ಲೆ ತಿನ್ನುತಿದ್ದರು. ಹೋಟೆಲ್ಲಿನಲ್ಲಿ ಬಳಸಿ ಬಿಸಾಡಿದ ಚಾ ಪುಡಿಯನ್ನೇ ತಂದು ಚಾ ಮಾಡಿ ಕುಡಿಯುತ್ತಾರೆ. ಒಮ್ಮೆ ಒಡ್ಡರ ರೊಟ್ಟಿ ಕಳವು ಮಾಡಿ ತಿನ್ನತ್ತಾರೆ. ಪರಡಿ ಮಾಡಿ ತಂದ ಅನ್ನವನ್ನು ಒಣಗಿಸಿ ಎರೆಡೆರಡು ದಿನ ಒಣಗಿಸಿ ವಾರಗಟ್ಟಲೆ ಅದನ್ನೇ ತಿನ್ನುತಿದ್ದರು. ಊಟಕ್ಕಾಗಿ ನಾನಾ ರೀತಿಯ ಪಡಿಪಾಟಲನ್ನು ಮಾಡುತಿದ್ದರು. ಹೊಟ್ಟೆಯ ಹಸಿವು ಹಾಗೂ ದೇಹದ ಹಸಿವು ಎರಡೂ ತೀವ್ರವಾಗಿ ಬಾಧಿಸಿವೆ. ಯಾರಿಗೆ ಯಾವುದು ಅಸಹ್ಯವೋ ಅಂತಹುದು ಕೂಡ ಬಡತನದ ಕಾರಣಕ್ಕೆ ಸಹ್ಯವಾಗಿತ್ತು.

ಯಾವ ಅಳಕೂ ಇಲ್ಲದೇ ನಿರ್ಭಿಡೆಯಾಗಿ ಎಲ್ಲವನ್ನೂ ತಿಳಿಸುವ ಇವರ ಧೈರ್ಯ ಮೆಚ್ಚುವಂತಹುದು. ಎಷ್ಟೋ ಮಂದಿ ತಮ್ಮ ಇತಿವೃತ್ತ ಅರುಹಲು ಮುದುಡಿ ಹೋಗುತ್ತಾರೆ. ಯಾರಾದರೂ ಕೇಳಿದರೆ ಮಾತು ಮರೆಸುತ್ತಾರೆ ಇಲ್ಲ ಸುಳ್ಳನ್ನೇ ಹೇಳಿ ನಂಬುವಂತೆ ಮಾಡುತ್ತಾರೆ. ಎಲ್ಲಾ ಆತ್ಮಕಥೆಗಳು ನೂರಕ್ಕೆ ನೂರರಷ್ಟು ವಾಸ್ತವಿಕತೆಯಿಂದ ಕೂಡಿರುವುದಿಲ್ಲ. ಎಲ್ಲವನ್ನೂ ಹೇಳಿಕೊಳ್ಳುವುದಕ್ಕೆ ಸಾಧ್ಯವೂ ಇಲ್ಲ. ಆದರೆ ಈ ಆತ್ಮಕಥೆಗಾರರು ಹೇಳಿಕೊಳ್ಳಲು ಹಿಂಜರಿಯಬಹುದಾದ ಅನೇಕ ಸಂಗತಿಗಳನ್ನು ಮುಕ್ತವಾಗಿಯೇ ತಿಳಿಸಿದ್ದಾರೆ. ಹಸಿವಿಗಾಗಿ ಏನೆಲ್ಲಾ ಮಾಡುತಿದ್ದರು, ಏನೆಲ್ಲಾ

ತಿನ್ನುತ್ತಿದ್ದರು ಎಂಬುದನ್ನು ಮುಚ್ಚುಮರೆ ಇಲ್ಲದೆ ತಿಳಿಸಿದ್ದಾರೆ. ಹಸಿವು ಮನುಷ್ಯನಿಗಿಂತಲೂ ಧೈತ್ಯವಾದುದು. ಹಸಿವಿನ ಮುಂದೆ ಏನೊಂದೂ ನಡೆಯುವುದಿಲ್ಲ. ಶ್ರೀಮಂತರಿಗೆ ಹಸಿವಾಗದ ಚಿಂತೆಯಾದರೆ ಬಡವರಿಗೆ ಹಸಿವನ್ನು ನೀಗಿಸುವುದೇ ದೊಡ್ಡ ಚಿಂತೆಯಾಗಿರುತ್ತದೆ. ಹಸಿರು ಕ್ರಾಂತಿ, ಸರ್ಕಾರದಿಂದ ಪಡಿತರ ವಿತರಣೆ, ಬಂಜರು ಭೂಮಿಯಲ್ಲೂ ಬೇಸಾಯ ಮುಂತಾದವುಗಳಿಂದಾಗಿ ಭಾರತದಲ್ಲಿ ಹಸಿವು ಸುಧಾರಿಸಿದೆ. ಇಂದಿಗೂ ಹಸಿವು ಮತ್ತು ಬಡತನ ಭಾರತದ ದೊಡ್ಡ ಶತೃಗಳಾಗಿವೆ.

**ಆಕರ ಗ್ರಂಥ**


- ಶರಣಕುಮಾರ ಲಿಂಬಾಳೆ. (2023). ಅಕ್ರಮ ಸಂತಾನ. (ಅನು, ದು.ನಿಂ.ಬೆಳಗಲಿ). ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.


**ಪರಾಮರ್ಶನ ಗ್ರಂಥಗಳು**


- ಪುರುಷೋತ್ತಮ ಬಿಳಿಮಲೆ. (2005). *ಬಂಡಾಯ ದಲಿತ ಸಾಹಿತ್ಯ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಹಿರೇಮಠ, ಎಸ್.ಎಸ್. (2001). *ದಲಿತ ಸಂಸ್ಕೃತಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.